Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 12/2025

ಪ್ರಾ.ಸಾ. 6 ಚಾ.ಸಾ 8

| | | |
|---|---|---|
| ಹೆಸರು | : | ಕಾಶಪ್ಪ |
| ತಂದೆಯ ಹೆಸರು | : | ಕಾಶಪ್ಪ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಕಾಕಲವಾರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 30-01-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-9 ಮತ್ತು 28 ರವರ ಪರಿಚಯ ಇರುತ್ತದೆ. ದಿಃ 02.10.2024 ರಂದು ನನ್ನನ್ನು ಮತ್ತು ಚಾಸಾ-9, ಚಾಸಾ-28 ರವರನ್ನು ಮನೆಗೆ ಕರೆಯಿಸಿದ್ದರು. ಚಾಸಾ-28 ರವರ ಮನೆಯ ಮುಂದೆ ಅಳವಡಿಸಿದ್ದ ಸಿಸಿ ಟಿವಿ ಕ್ಯಾಮರದಲ್ಲಿನ ವಿಡಿಯೋವನ್ನು ಪೆನಡ್ರೈವನ್ನು ಹಾಕಿಕೊಂಡು ಜಪ್ತಿಪಡಿಸಿಕೊಂಡರು. ನರೇಂದ್ರ ಎಂಬ ಹುಡುಗ ಚಾಸಾ-28 ರವರ ಅಂಗಡಿಯ ಮುಂದೆ ಕೊಲೆ ಆಗುವುದಕ್ಕಿಂತ ಪೂರ್ವದಲ್ಲಿ ಅಲ್ಲಿ ನಡೆದಾಡಿದ ಬಗ್ಗೆ ವಿಡಿಯೋವನ್ನು ಪೆನಡ್ರೈವನ್ನು ಹಾಕಿಕೊಂಡು ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿದಾರರಿಗೆ ಈಗ ಜಪ್ತಿ ಪಂಚನಾಮೆಯನ್ನು ತೋರಿಸಲಾಗಿದ್ದು ಅದನ್ನು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.38** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.38(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಟ್ಟು ನಾಲ್ಕು ಭಾವಚಿತ್ರಗಳನ್ನು ತೆಗೆದಿದ್ದು ಅವುಗಳನ್ನು **ನಿ.ಪಿ.39 ರಿಂದ 42** ಎಂದು ಗುರುತಿಸಲಾಯಿತು. ಪೆನಡ್ರೈವನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಬಟ್ಟೆ ಸೀಲನ್ನು ನ್ಯಾಯಾಲಯದ ಅನುಮತಿಯೊಂದಿಗೆ ಹೊಡೆದು ನೋಡಲಾಯಿತು. ಅದರಲ್ಲಿರುವ ಪೆನಡ್ರೈವನ್ನು ನೋಡಿ ಗುರುತಿಸಿದ್ದು ಅದನ್ನು **ಮು.ಮಾ.5** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

2. ನಾನು ಐ.ಟಿ.ಐ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿ.ಪಿ.38 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.38 ರಲ್ಲಿ ನರೇಂದ್ರ ಎಂಬ ಹುಡುಗ ಚಾಸಾ-28 ರವರ ಅಂಗಡಿಯ ಮುಂದೆ ಕೊಲೆ ಆಗುವುದಕ್ಕಿಂತ ಪೂರ್ವದಲ್ಲಿ ಅವರ ಅಂಗಡಿಯ ಮುಂದೆ ಓಡಾಡಿದ್ದಾನೆ ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಕೊಲೆ ಆಗುವುದಕ್ಕಿಂತ ಪೂರ್ವದಲ್ಲಿ ಅಲ್ಲಿ ಓಡಾಡಿದ ಬಗ್ಗೆ ಬರೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.39 ರಿಂದ 42 ಭಾವಚಿತ್ರಗಳನ್ನು ತೆಗೆದ ಬಗ್ಗೆ ನಿ.ಪಿ.38 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಅಲ್ಲಿ ತೆಗೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ದೃಶ್ಯವಳಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ದೃಶ್ಯವಳಿ ತೋರಿಸಿದ ಬಗ್ಗೆ ನಿ.ಪಿ.38 ರಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಮು.ಮಾ.5 ಯಾವ ಕಂಪನಿದ್ದು, ಯಾವ ವರ್ಷ ತಯಾರು ಆಗಿರುತ್ತದೆ ಎಂದು ನಿ.ಪಿ.38 ರಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿದಾರರು ಮು.ಮಾ.5 ಸ್ಕ್ಯಾನಡಿಕ್ಸ ಕಂಪನಿದ್ದು ಎಂದು ಬರೆಯುತ್ತದೆ ಎಂದು ನುಡಿಯುತ್ತಾರೆ. ಸ್ಕ್ಯಾನಡಿಕ್ಸ ಕಂಪನಿಯ ಪೆನಡ್ರೈವ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪೆನಡ್ರೈವನ ಸಿಸ್ಟಮನಲ್ಲಿ ಹಾಕಿ ನೋಡಿದ್ದು ಆದರೆ ಯಾವ ಸಿಸ್ಟಮನಲ್ಲಿ ಹಾಕಿ ನೋಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆಫೀಸರ ಇದ್ದರು ಅವರ ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿದಾರರು ಅವರ ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅಲ್ಲಿ ಪೊಲೀಸ ಸಿಬ್ಬಂದಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಮೃತ ಪಟ್ಟ ಬಾಲಕ ಮತ್ತು ನಾನು ಒಂದೆ ಜಾತಿಯವರು ಆಗಿರುತ್ತೇವೆ ಆದರೆ ಸಂಬಂಧಿಕರು ಆಗಿರುವುದಿಲ್ಲ.

3. ದಿಃ 02.10.2024 ರಂದು ನನ್ನನ್ನು ಮತ್ತು ಚಾಸಾ-9 ರವರನ್ನು ಚಾಸಾ-28 ರವರ ಮನೆಯ ಹತ್ತಿರ ಕರೆಯಿಸಿರುತ್ತಾರೆ ಮತ್ತು ನಮ್ಮ ಸಮಕ್ಷಮ ಮು.ಮಾ.5 ನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.5 ಈ ಪ್ರಕರಣಕ್ಕೆ ಸಂಬಂಧಿಸಿರುತ್ತದೆ ಅದನ್ನು ನನ್ನ

ಸಮಕ್ಷಮ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.39 ರಿಂದ 42 ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ, ಎಲ್ಲಿ ತೆಗೆದಿರುತ್ತಾರೆ ಎಂದು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.